ಸಿ.ಸಿಃ 1353/2024

ಚಾ.ಸಾಃ 07

ಪ್ರಾ.ಸಾಃ 06

# ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಸವನ-ಬಾಗೇವಾಡಿ

**ಸಾಕ್ಷಿಗೆ ದಿನಾಂಕ 06.01.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

ಹೆಸರು ಃ ಅಲ್ಲಾಹುಸೇನ ಯರನಾಳ

ತಂದೆಯ ಹೆಸರು ಃ ಭಾಷೆಸಾಬ

ವಯಸ್ಸು ಃ 37 ವರ್ಷ

ಉದ್ಯೋಗ ಃ ವ್ಯವಸಾಯ

ವಾಸಸ್ಥಳ ಃ ಟಕ್ಕಳಕಿ

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದಃ**

ಮೃತ ಕರಿಯಪ್ಪರವರ ಪರಿಚಯ ಇರುತ್ತದೆ. ದಿಃ 29.01.2024 ರಂದು ನಾನು ಬಸ್ಸ ನಿಲ್ದಾಣದಲ್ಲಿ ಇದ್ದಾಗ ಅಪಘಾತದ ವಿಷಯ ತಿಳಿದಿರುತ್ತದೆ. ನಾನು ಮತ್ತು ಚಾಸಾ 8 ಮತ್ತು 10 ರವರೊಂದಿಗೆ ಸ್ಥಳಕ್ಕೆ ಹೋಗಿ ನೋಡಲಾಗಿ ಕರಿಯಪ್ಪರವರಿಗೆ ಅಪಘಾತದಲ್ಲಿ ತೀರಿಕೊಂಡಿದ್ದರು. ಚಾಸಾ 6 ರವರಿಗೆ ವಿಚಾರಿಸಲಾಗಿ ಅವರ ತಾನು ಮತ್ತು ಕರಿಯಪ್ಪನವರು ಮೋಟರ ಸೈಕಲ ಮೇಲೆ ಹೋಗವಾಗ ಹಿಂದಿನಿಂದ ಒಂದು ಕಾರ ಬಂದು ಡಿಕ್ಕಿಪಡಿಸಿದ ಕಾರಣ ಅಪಘಾತವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಕಾರ ನಂ.ಕೆಎ-28/ಝುಡ್-7298 ಆಗಿರುತ್ತದೆ. ಕಾರ ಚಾಲಕ ಹೆಸರು ಅಶ್ಫಾಕ್ ಎಂದು ಗೊತ್ತಾಗಿರುತ್ತದೆ. ಅಪಘಾತವಾದ 2 ದಿನಗಳ ನಂತರ ಪೊಲೀಸರು ನಮ್ಮ ಕರೆಯಿಸಿ ಆರೋಪಿಯನ್ನು ತೋರಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಮತ್ತು ಮರುಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎನ್.ಎಸ್.ಪಿ. ವಕೀಲರಿಂದಃ-**

**ಸಿ.ಸಿಃ 1353/2024**

**ಚಾ.ಸಾಃ 07**

**ಪ್ರಾ.ಸಾಃ 06**

**2.** ನಾನು SSLC ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಅಪಘಾತದ ಬಗ್ಗೆ ಚಾಸಾ 6 ರವರ ಮಾಹಿತಿ ನೀಡಿರುತ್ತಾರೆ ಎಂದರೆ ಸರಿ. ಅಪಘಾತವನ್ನು ನಾನು ಖುದ್ದಾಗಿ ನೋಡಿರುವುದಿಲ್ಲ. ಆರೋಪಿಯನ್ನು ಪೊಲೀಸರು ಪೊಲೀಸ್ ಠಾಣೆಯಲ್ಲಿ ನನಗೆ ತೋರಿಸಿರುತ್ತಾರೆ ಎಂದರೆ ಸರಿ. ಅಪಘಾತದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರು ಸಹ ಚಾಸಾ 6 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ನಾನು ಯಾವುದೇ ಹೇಳಿಕೆ ಮತ್ತು ಮರುಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ಕರಿಯಪ್ಪನ ಕುಟುಂಬಕ್ಕೆ ಪರಿಹಾರ ಸಿಗಬೇಕೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ. ಅಮೀತ್ ಘಟ್ಟಿ )**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**